Municipal High School building at Arsikere (amount required).

Q.—650. Sri K. PANCHAKSHARIAH (Arsikere).—

Will the Government be pleased to state:—

(*a*) the total amount that is required to construct the Municipal High School building at Arsikere;

(*b*) of this, the amount of the Government grant and the quota of the Municipality?

A.—Sri T. CHANNIAH (Minister for Public Health and Local Self-Government).—

(*a*) Rs. 1,13,778.

(*b*) Government Grant Rs. 50,000.
Municipal quota Rs. 63,778.

ಶ್ರೀ ಕೆ. ಪಂಚಾಕ್ಷರಯ್ಯ.—Estimate 1,13,778 ರೂಪಾಯಿಗಳು ಎಂದು ಹೇಳಿದ್ದೀರಿ. ಇದನ್ನು ಮುನಿಸಿಪಾಲಟಿಯವರಿಂದಲೇ ಕಟ್ಟಿಸುವುದಕ್ಕೆ ಅವಕಾಶ ಕೊಟ್ಟಿದ್ದೀರಾ?

ಶ್ರೀ ಟಿ. ಚನ್ನಯ್ಯ.—ಹೌದು.

ಶ್ರೀ ಕೆ. ಪಂಚಾಕ್ಷರಯ್ಯ.—ಕಾನೂನಿನ ಪ್ರಕಾರ estimate ಏಳುವರೆ ಸಾವಿರ ರೂಪಾಯಿಗಳಿಗಿಂತ ಮೇಲ್ಪಟ್ಟು ಇದ್ದರೆ Public Works Departmentನವರಿಗೆ ಆ ಕೆಲಸವನ್ನು ವಹಿಸಬೇಕೆಂದು ನಿಯಮವಿಲ್ಲವೇ?

ಶ್ರೀ ಟಿ. ಚೆನ್ನಯ್ಯ.—ಸರ್ಕಾರದ ಮಂಜೂರಾತಿಯನ್ನು ಪಡೆದು ಅವರೇ ಕಟ್ಟುತ್ತಿದ್ದಾರೆ.

ಶ್ರೀ ಕೆ. ಪಂಚಾಕ್ಷರಯ್ಯ.—ಅವರ ಹತ್ತಿರ ಯಾರಾದರೂ Technical men ಇದ್ದಾರೆಯೇ?

ಶ್ರೀ ಟಿ. ಚನ್ನಯ್ಯ.—ಹೌದು.

ಶ್ರೀ ಕೆ. ಪಂಚಾಕ್ಷರಯ್ಯ.—Technical ಮನುಷ್ಯರನ್ನು ಇಟ್ಟುಕೊಂಡು ಈ ಕೆಲಸ ನಡೆಸುತ್ತಿದ್ದಾರೆಯೇ?

ಶ್ರೀ ಟಿ. ಚನ್ನಯ್ಯ.—ಮುನಿಸಿಪಾಲಟಿಯವರು Public Works ಇಲಾಖೆಯಿಂದ ಈ ಕೆಲಸವನ್ನು supervise ಮಾಡುವುದಕ್ಕಾಗಿ ಒಬ್ಬ Sub-overseerರವರ ಸರ್ವಿಸ್ಸನ್ನು ತೆಗೆದುಕೊಂಡಿದ್ದಾರೆ.

ಶ್ರೀ ಕೆ. ಪಂಚಾಕ್ಷರಯ್ಯ.—ಒಂದು ಲಕ್ಷ ಚಿಲ್ಲರೆ ರೂಪಾಯಿಗಳ ಕೆಲಸವನ್ನು ಮುನಿಸಿಪಾಲಟಿಯವರೇ ನಡೆಸುತ್ತಿರಬೇಕಾದರೆ ಇದಕ್ಕೆ Technical men ಯಾರನ್ನಾದರೂ ನೇಮಕ ಮಾಡಿಕೊಂಡಿದ್ದಾರೆಯೇ?

ಶ್ರೀ ಟಿ. ಚನ್ನಯ್ಯ.—ನಾನು ಆಗಲೇ ಹೇಳಿದಹಾಗೆ public works ಇಲಾಖೆಯಿಂದ ಒಬ್ಬರು Sub-overseerನ್ನು ತೆಗೆದುಕೊಂಡಿದ್ದಾರೆ. ಆಮೇಲೆ ಅವರ ಮೇಲಧಿಕಾರಿಗಳು ಆಗಾಗ್ಗೆ 'supervise ಮಾಡಬೇಕೆಂದು' ವ್ಯವಹಾರನಡೆಸಿ ತೀರ್ಮಾನ ಮಾಡಿಕೊಂಡಿದ್ದಾರೆ.

Health Units in Mulbagal Taluk

Q.—738. Sri G. NARAYANA GOWDA (Mulbagal-Srinivaspur).—

Will the Government be pleased to state:—

whether they intend starting health units in Mulbagal Taluk to eradicate plague which breaks out every year?

A.—Sri T. CHANNIAH (Minister for Public Health and Local Self-Government).—

A comprehensive scheme for the control of plague in the border areas of Madras and Mysore States including Mulbagal Taluk is under the consideration of Government. The starting of Health Units in Mulbagal Taluk also to check plague is included in that scheme.

ಶ್ರೀ ಜಿ. ನಾರಾಯಣಗೌಡ.—ಈ ಪ್ರಶ್ನೆಗೆ ಉತ್ತರ ಕೊಡುತ್ತಾ "ಒಂದು ಸಮಗ್ರವಾದ ಯೋಜನೆ ಪರ್ಯಾಲೋಚನೆಯಲ್ಲಿದೆ" ಎಂದು ಹೇಳಿದ್ದೀರಿ. ಯಾವಾಗ ಈ ಯೋಜನೆಯನ್ನು Sanction ಮಾಡುತ್ತೀರಿ?

ಶ್ರೀ ಟಿ. ಚನ್ನಯ್ಯ.—ಈ comprehensive ಯೋಜನೆಗೆ ಬಹಳ ಹಣ ಖರ್ಚಾಗುತ್ತದೆ, ಸುಮಾರು 22 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಒಂದು ಸ್ಕೀಮನ್ನು ಡೈರಕ್ಟರವರು ಕಳುಹಿಸಿದ್ದಾರೆ. ಈಗಿರತಕ್ಕ ಎಲ್ಲಾ Local Fund Dispensary ಗಳನ್ನೂ Health unitಗಳಾಗಿ ಮಾಡಬೇಕೆಂಬುದೇ ಈ ಸ್ಕೀಮಿನ ಉದ್ದೇಶ. ಈ ಸ್ಕೀಮು ಸರ್ಕಾರದ ಪರ್ಯಾಲೋಚನೆಯಲ್ಲಿದೆ.

ಶ್ರೀ ಜಿ. ನಾರಾಯಣಗೌಡ.—ಇಷ್ಟು ಹೆಚ್ಚು ಹಣ ಖರ್ಚಾಗುವುದರಿಂದ ಈ ಯೋಜನೆಯನ್ನು ಕೈಬಿಡಬೇಕೆಂದು ಯೋಚನೆ ಮಾಡುತ್ತಿದ್ದೀರಾ?

ಶ್ರೀ ಟಿ. ಚನ್ನಯ್ಯ.—ಇಲ್ಲ. Comprehensive ಆದ ಸ್ಕೀಮ್ ಮಾಡಿದರೆ ಇಷ್ಟು ಹಣ ಖರ್ಚಾಗುತ್ತದೆ. ಅದಕ್ಕೆ ಬದಲು ಎಲ್ಲಿ ಎಲ್ಲಿ ಅವಶ್ಯಕತೆಯಿದೆಯೋ ಅಲ್ಲಿ ಹೆಲ್ತ್ ಯೂನಿಟ್‌ಗಳನ್ನು ಏರ್ಪಡಿಸಿ ಕಾರ್ಯಗತ ಮಾಡುವುದರಲ್ಲಿ ಅಷ್ಟೊಂದು ತೊಂದರೆಯಿಲ್ಲ. ಇದನ್ನು ಯೋಚನೆ ಮಾಡುತ್ತಿದ್ದೇವೆ.

ಶ್ರೀ ಜಿ. ನಾರಾಯಣಗೌಡ.—ಮುಳಬಾಗಿಲು ತಾಲ್ಲೂಕಿನಲ್ಲಿ ಪ್ರತಿಯೊಂದು ವರ್ಷವೂ ಪ್ಲೇಗು ಉಪದ್ರವವು ಇರುವುದು ತಮ್ಮ ಗಮನಕ್ಕೆ ಬಂದಿದೆಯೆ?

ಶ್ರೀ ಟಿ. ಚನ್ನಯ್ಯ.—Border Areaಗಳಲ್ಲಿ ಮುಳಬಾಗಿಲು, ಶ್ರೀನಿವಾಸಪುರ ಮುಂತಾದ ಪ್ರದೇಶಗಳಲ್ಲಿ ಆಗಾಗ್ಗೆ ಪ್ಲೇಗು ತಲೆದೋರುತ್ತಿದೆಯೆಂದು ತಿಳಿದುಬಂದಿದೆ. ಆದ್ದರಿಂದಲೇ ಯೋಚನೆ ಮಾಡುತ್ತಿದ್ದೇವೆ.

ಶ್ರೀ ಜಿ. ನಾರಾಯಣಗೌಡ.—ಹಾಗಾದರೆ, ಈ ಎರಡು ತಾಲ್ಲೂಕುಗಳಲ್ಲಲ್ಲಿಯೂ ಆರೋಗ್ಯ ಕೇಂದ್ರುಗಳನ್ನು ಏರ್ಪಡಿಸುವ ಅವಶ್ಯಕತೆಯಿಲ್ಲವೆ?

ಶ್ರೀ ಟಿ. ಚನ್ನಯ್ಯ.—Consider ಮಾಡುತ್ತಿದ್ದೇವೆ.

ಶ್ರೀ ಜಿ. ನಾರಾಯಣಗೌಡ.—ಬೇಗ ಆರೋಗ್ಯ ಕೇಂದ್ರಗಳನ್ನು ಏರ್ಪಾಡು ಮಾಡುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಯೋಚನೆ ಮಾಡುತ್ತೇವೆ.

Sri H. C. LINGA REDDY.—May I know whether the comprehensive scheme is intended for starting these health units in the border areas also ?

Sri T. CHANNIAH.—The comprehensive scheme is not meant for starting of health units in border areas but it is meant to convert all the Local Fund Dispensaries into Health Units to undertake the work of D.D.T. spraying and all other works relating to Public Health Department. That scheme costs about Rs. 22, lakhs to the Government.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಈ ವರ್ಷ ಮಳುಬಾಗಿಲು ತಾಲ್ಲೂಕಿನಲ್ಲಿ ಪ್ಲೇಗು ಬಂದಿರಲಿಲ್ಲವೆ ?

ಶ್ರೀ ಟಿ. ಚನ್ನಯ್ಯ.—ಬಂದಿತ್ತು.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಎಷ್ಟು ಜನರಿಗೆ ಪ್ಲೇಗು ತಗುಲಿತ್ತು, ಎಷ್ಟು ಜನರು ಸತ್ತರೆಂಬುದನ್ನು ಹೇಳುತ್ತೀರಾ ?

ಅಧ್ಯಕ್ಷರು.—ಹೇಗೆ ಹೇಳುವುದು ? ಈಗ ಅದನ್ನು ಹೇಳುವುದಕ್ಕಾಗುವುದಿಲ್ಲ.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಐವತ್ತು ಜನರು ಸತ್ತಿದ್ದಾರೆಂದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ ಚನ್ನಯ್ಯ.—ನಲವತ್ತು ಜನರ ಮೇಲೆ ಎಂದು ಹೇಳಬಹುದು.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ತಮ್ಮ ಅಭಿಪ್ರಾಯದಲ್ಲಿ ದುಡ್ಡು ಪ್ರಾಮುಖ್ಯವೇ ಹೊರತು ಅವರ ಪ್ರಾಣಗಳು ಮುಖ್ಯವಲ್ಲ ಅಲ್ಲವೇ ?

ಶ್ರೀ ಟಿ. ಚನ್ನಯ್ಯ.—ಆ ರೀತಿಯೇನಿಲ್ಲ.

ಶ್ರೀ ವಿ. ಆರ್. ನಾಯ್ಡು.—ಪ್ಲೇಗು ಉಪದ್ರವವನ್ನು ತಡೆಗಟ್ಟುವುದಕ್ಕೆ 23 ಲಕ್ಷ ರೂಪಾಯಿಗಳು ಖರ್ಚಾಗುತ್ತವೆಂದು ಹೇಳಿದಿರಿ. ನಮ್ಮ ಪೂರ್ವಿಕರು ದುಡ್ಡು ಖರ್ಚು ಮಾಡದೆಯೇ, ಮಾರಮ್ಮ, ಕಾಳಮ್ಮ ಮುಂತಾದ ದೇವಿಗೆ ಪೂಜೆ ಮಾಡಿದರೆ ಪ್ಲೇಗು ಮುಂತಾದುವು ನಿಂತುಹೋಗುತ್ತದೆಂದು ಹೇಳಿ ಮಾಡುತ್ತಿರಲಿಲ್ಲವೆ ?

(No answer)

Road from Haradanahalli to Terakanambi *via* Arakalvadi.

Q.—779. **Sri U. M. MADAPPA** (Chamarajanagar).—

Will the Government be pleased to state :—

(*a*) whether grant was allotted for A.R. and S.R. of Haradanahalli to Terakanambi road *via* Arakalavadi in Chamarajanagar Taluk, either by Mysore District Board or P.W.D. for the year 1954-55 ;

(*b*) if so, the amount allotted and spent so far ;

(*c*) if no grant was allotted, the reason for the same ;

(*d*) the next remedy they would consider ?

A.—**Sri T. CHANNIAH** (Minister for Public Health and Local Self-Government).—

(*a*) Yes. (Both by the P. W. D. and also the District Board, Mysore)

(*b*) By the P. W. D. A.R. S.R. 1954-55 ... Rs. 2,400 1,600

By the District Board, Mysore. Rs. 3,200 ...

(*c*) and (*d*) do not arise in view of reply to clause (*b*).

ಶ್ರೀ ಯು. ಎಂ. ಮಾದಪ್ಪ.—(ಬ)ಗೆ ಉತ್ತರವಾಗಿ ಕೊಟ್ಟಿರತಕ್ಕ ಮೊಬಲಗು ಖರ್ಚಾಗಿದೆಯೇ ?

ಶ್ರೀ ಟಿ. ಚನ್ನಯ್ಯ.—ಆ ಮೊಬಲಗು 1954-55ರಲ್ಲಿ allot ಆಗಿರುವುದು. ಆದು ಖರ್ಚಾಗಿದೆಯೇ ಇಲ್ಲವೇ ಎಂಬುದನ್ನು ಹೇಳಲು ನೋಟೀಸ್ ಬೇಕು.

ಶ್ರೀ ಯು. ಎಂ. ಮಾದಪ್ಪ.—ನನ್ನ ಪ್ರಶ್ನೆ ಸ್ಪಷ್ಟವಾಗಿದೆ. ಈ ತಹಲ್‌ವರೆಗೂ ಒದಗಿಸಿದ್ದ ಹಣದಲ್ಲಿ ಖರ್ಚು ಮಾಡಿದ ಮೊಬಲಗೆಷ್ಟು ಎಂದು ಕೇಳಿದ್ದೇನೆ.

ಶ್ರೀ ಟಿ. ಚನ್ನಯ್ಯ.—ಒದಗಿಸಿದ್ದ ಮೊಬಲಗನ್ನು ಕೇಳಿದ್ದೀರಿ, ಅದನ್ನು ಕೊಟ್ಟಿದೆ. To say whether the amount is spent or not, I want notice.

ಶ್ರೀ ಯು. ಎಂ. ಮಾದಪ್ಪ.—ಒದಗಿಸಿದ್ದ ಮತ್ತು ಖರ್ಚ್ ಮಾಡಿರುವ ಹಣವೆಷ್ಟು ಎಂದು ಕೇಳಿದ್ದೇನೆ.

Sri T. CHANNIAH.—Perhaps the amount has been spent. I am not aware of it, Sir.

ಶ್ರೀ ಯು. ಎಂ. ಮಾದಪ್ಪ.—ಹಾಗಾದರೆ, ಈ ವಿಷಯದಲ್ಲಿ ಜಾಗ್ರತೆ ಕಾರ್ಯಕ್ರಮ ತೆಗೆದುಗೊಳ್ಳುತ್ತೀರಾ ?

Sri T. CHANNIAH.—It will be done.

ಶ್ರೀ ಯು. ಎಂ. ಮಾದಪ್ಪ.—ಈ ಪ್ರಶ್ನೆಗೆ ಉತ್ತರದ ಒಂದು ಭಾಗ ತಮಗೆ ಸೇರಿದ್ದು ; ಇನ್ನೊಂದು P.W.Dಗೆ ಸೇರಿದ್ದು. ಅವರೇನು ಹೇಳುತ್ತಾರೆ ಇದಕ್ಕೆ ಉತ್ತರವಾಗಿ.

Mr. SPEAKER.—If that information is not supplied, you can get that information.

Cross Barrett Cottages in the Corporation Area.

Q.—809. **Sri SYDNEY A. THOMAS** (Nominated).—

Will the Government be pleased to state :—

(*a*) whether the Cross Barrett Cottages in the Corporation Area were